## ಬಿಸಿಲು-ಧಗೆಯಿಂದ ಏನನ್ನು ಕಲಿತೆವು?

ಇತ್ತೀಚಿನ ವರ್ಷಗಳ ಬೇಸಗೆಗಳು ಅಸಹನೀಯ ಎನ್ನುವಷ್ಟು ಧಗೆಯಿಂದ ಕೂಡಿವೆ. 2024ರಲ್ಲಿ ರಾಜ್ಯದ ಬಹುತೇಕ ಪ್ರದೇಶಗಳಲ್ಲಿನ ಉಷ್ಣಾಂಶ 40 ಡಿಗ್ರಿ ಸೆಲ್ಸಿಯಸ್ ದಾಟಿತ್ತು; ಕೆಲವು ಪ್ರದೇಶಗಳಲ್ಲಿನ ತಾಪಮಾನ 50 ಡಿಗ್ರಿ ಸೆಲ್ಸಿಯಸ್ ಮುಟ್ಟಲು ಪೈಪೋಟಿ ನಡೆಸಿದಂತಿತ್ತು. ಆದರೆ, ಬಿಸಿಲು ದಿನಗಳ ಬೆನ್ನಿಗೆ ಕಾಣಿಸಿಕೊಂಡ ಸುದೀರ್ಘ ಮಳೆಗಾಲ ಬೇಸಗೆಯ ಝಳದ ಸುಡುನೆನಪುಗಳಿಂದ ಹೊರಬರಲು ಕಾರಣವಾಗಿತ್ತು. 2025ರಲ್ಲಿ ಮತ್ತದೇ ಬಿಸಿಲು, ಮತ್ತದೇ ಧಗೆ. ಮಳೆಯ ಆರ್ದ್ರತೆಯನ್ನೆಲ್ಲ ಮರೆಸುವಂತೆ ಸುಡುಬಿಸಿಲು. ಕಳೆದ ಮಾರ್ಚ್, ಏಪ್ರಿಲ್ ಹಾಗೂ ಮೇ ತಿಂಗಳುಗಳು ಅಗ್ನಿಕುಂಡದಂತೆ ಪರಿಣಮಿಸಿದ್ದವು.

ಬಿಸಿಲಿನ ತೀವ್ರತೆಗೆ ಪರಿಹಾರದ ರೂಪದಲ್ಲಿ ಹವಾನಿಯಂತ್ರಕಗಳು ಹಾಗೂ ಕೂಲರ್‌ಗಳಿಗೆ ಮೊರೆಹೋಗುತ್ತಿದ್ದೇವೆ. 2023ರ ಆರ್ಥಿಕ ವರ್ಷದಲ್ಲಿ 80 ಲಕ್ಷ ಎ.ಸಿ. ಯಂತ್ರಗಳು ಮಾರಾಟಗೊಂಡಿದ್ದವು. ಆ ಸಂಖ್ಯೆ 2024ರಲ್ಲಿ 1 ಕೋಟಿ ಮೀರಿತ್ತು ಎನ್ನಲಾಗಿದೆ. ಶೀತಲ ಯಂತ್ರಗಳ ಬಳಕೆ ಒಟ್ಟಾರೆ ಪರಿಸರವನ್ನು ಮತ್ತಷ್ಟು ಬಿಸಿಯಾಗಿಸುತ್ತದೆ ಹಾಗೂ ಕಲುಷಿತಗೊಳಿಸುತ್ತದೆ ಎನ್ನುವುದನ್ನು ತಿಳಿದಿದ್ದೂ ಧಗೆಯಿಂದ ಪಾರಾಗಲಿಕ್ಕೆ ಅವುಗಳ ಮೊರೆ ಹೋಗುವುದು ಸದ್ಯದ ಸಂದರ್ಭದಲ್ಲಿ ಅನಿವಾರ್ಯ ಎನ್ನುವಂತಾಗಿದೆ. ತಾತ್ಕಾಲಿಕ ಪರಿಹಾರಗಳಾಚೆಗೆ ತಾಪಮಾನವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ನಾವೇನು ಮಾಡಿದ್ದೇವೆ ಹಾಗೂ ಮಾಡಲು ಹೊರಟಿದ್ದೇವೆ ಎನ್ನುವ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ನಿಟ್ಟಿನಲ್ಲಿ ಸಾರ್ವತ್ರಿಕ ಹಾಗೂ ವೈಯಕ್ತಿಕ ನೆಲೆಗಳಲ್ಲಿ ಗಂಭೀರ ಪ್ರಯತ್ನಗಳೇ ನಡೆದಿಲ್ಲ. ಉಸಿರುಗಟ್ಟಿಸುವ ತೀವ್ರವಾದ ಬಿಸಿಲು–ಮಳೆಯಿಂದ ನಾವು ಪಾಠ ಕಲಿಯಬೇಕಲ್ಲವೆ?

ನೀರನ್ನು ಮರುಪೂರಣ ಮಾಡುವ ಬಗ್ಗೆ ಆಸಕ್ತಿಯೇ ಇಲ್ಲ.

ಇಂಗಲು ಆಸ್ಪದವಿಲ್ಲದ ಕಾರಣದಿಂದಾಗಿ ಮಳೆ ನೀರು ದಿಕ್ಕೆಟ್ಟು ಮನೆಗಳಿಗೆ ನುಗ್ಗತೊಡಗುತ್ತದೆ. ನಮ್ಮ ಹೊಣೆಗೇಡಿತನದಿಂದಲೇ ಸೃಷ್ಟಿಯಾದ ದುರಂತಕ್ಕೆ ನಾವು ಇತರರನ್ನು ಹೊಣೆ ಮಾಡುತ್ತೇವೆ.

ಇನ್ನು ಕರಾವಳಿ, ಕೊಡಗಿನ ಸ್ಥಿತಿಯೂ ಆಧುನಿಕತೆಯ ಪರಿಣಾಮವೇ. ಪ್ರವಾಸೋದ್ಯಮ ಬೆಳೆದಂತೆಲ್ಲಾ ಗುಡ್ಡಗಳನ್ನು ಐಷಾರಾಮಿ ಸ್ಥಾನಗಳನ್ನಾಗಿಸಿದೆವು. ಗುಡ್ಡಗಳ ಮೇಲೆ ಸ್ಥಾವರಗಳೂ, ಕೃತಕ ಗುಂಡಿಗಳೂ ರೂಪುಗೊಳ್ಳತೊಡಗಿದವು. ಮನುಷ್ಯನ ಹಸ್ತಕ್ಷೇಪ ಹೆಚ್ಚಾದಂತೆಲ್ಲ ಗುಡ್ಡಗಳ ಮೂಲಸ್ವರೂಪಕ್ಕೆ ಧಕ್ಕೆಯುಂಟಾಗಿದೆ. ಇದರ ಫಲವೇ ಮಳೆಯಿಂದಾಗಿ ಗುಡ್ಡ ಕುಸಿತ.

### ಮಳೆ ನೀರನ್ನು ಹೊರಗೆ ಬಿಟ್ಟು...

ಮಳೆ ನೀರನ್ನು ಬಿದ್ದಲ್ಲೇ ಭೂಮಿಗೆ ಸೇರಿಸಬೇಕು ಎನ್ನುವುದು ಆಧುನಿಕ ನಗರ ನಾಗರಿಕತೆ ಅನುಸರಿಸಬೇಕಾದ ಪರಿಸರ ಕಾಳಜಿಯ ಪ್ರಾಥಮಿಕ ಪಾಠ. ಆದರೆ, ನಮ್ಮ ನಗರ ನಾಗರಿಕತೆಗೆ ಪರಿಸರಪಾಠಗಳನ್ನು ಉಲ್ಲಂಘಿಸುವ ಚಪಲ. ಲಕ್ಷ ಲಕ್ಷ ರೂಪಾಯಿ ಸುರಿದು ಮನೆಯ ಒಳಹೊರಗನ್ನು ಅಲಂಕರಿಸುತ್ತೇವೆ. ಒಂದು ಗಿಡವನ್ನು ಬೆಳೆಸುವುದು ಸಾಧ್ಯವಾಗದೆ ಹೋದರೂ, ಮನೆ ತುಂಬ ತೇಗದ ಹೊಳಪು ತುಂಬಿಕೊಂಡಿರಬೇಕೆಂದು ಬಯಸುತ್ತೇವೆ. ಮಲಗಲು, ಉಣಲು, ಹರಟೆಗೆ, ಪ್ರತಿಯೊಂದಕ್ಕೂ ಒಂದೊಂದು ಕೋಣೆ. ಎಡತಾಕಿದರೆ ಎಟಕುವಂತೆ ಮನೆ ತುಂಬ ಶೌಚದ ಗುಂಡಿಗಳು. ಆದರೆ, ಕೆಲವು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಮಳೆ ನೀರು ಸಂಗ್ರಹದ ಇಂಗು ಗುಂಡಿ ಮಾಡಲು ನಮಗೆ ಬಡತನ! ಅನಿವಾರ್ಯವಾದರೆ, ಸಾವಿರಾರು ರೂಪಾಯಿ ದಂಡ ಕಟ್ಟೇವು, ಮಳೆ ನೀರು ಸಂಗ್ರಹಿಸೆವು.

ಮಳೆ ನೀರು ಸಂಗ್ರಹ ಆಧುನಿಕ ಸಂದರ್ಭದಲ್ಲಿ ನಾಗರಿಕ ಕರ್ತವ್ಯಗಳಲ್ಲೊಂದು. ಮರ ಬೆಳೆಸದ, ಮಳೆ ನೀರು ಸಂಗ್ರಹಿಸದ ಬದುಕು ಭೂಮಿಗೆ ಭಾರವಲ್ಲದೆ ಬೇರೇನೂ ಅಲ್ಲ. ಆದರೆ, ನೀರನ್ನು ಖರ್ಚು ಮಾಡುವುದು ನಮಗೆ ಗೊತ್ತೇ ಹೊರತು, ಉಳಿಸುವುದು ಸಂಗ್ರಹಿಸುವುದು ನಮಗೆ ಬೇಡದ ಉಸಾಬರಿ. ಬೆಳಗ್ಗೆ ಅಂಗಳ ತೊಳೆಯಲು ಬಕೆಟ್‌ಗಟ್ಟಲೆ ನೀರು ಚೆಲ್ಲುತ್ತೇವೆ. ಸ್ಕೂಟರ್, ಕಾರುಗಳಿಗೆ ಕೊಳವೆಗಳಲ್ಲಿ ಅಭಿಷೇಕ ಮಾಡುತ್ತೇವೆ. ಮನೆಯ ಮುಂದೆ ಮಳೆಯ ನೀರು ನಿಲ್ಲಬಾರದೆಂದು ಬಯಸುವವರೇ ತಮ್ಮ ಮನೆಯೆದುರು ರಾಡಿ ಮಾಡುತ್ತಾರೆ. ಹೀಗೆ ನೀರು ಪೋಲು ಮಾಡುವವರು ಮಳೆನೀರಿನ ಸಂಗ್ರಹದ ಜವಾಬ್ದಾರಿ ತಮ್ಮದೆಂದು ಯೋಚಿಸುವುದೇ ಇಲ್ಲ.

ಚರಂಡಿಗಳು, ರಾಜಕಾಲುವೆಗಳು ಕಟ್ಟಿಕೊಳ್ಳುವುದರಿಂದ ಕೃತಕ ನೆರೆಯುಂಟಾಗಿ ಮನೆಗಳಿಗೆ ನೀರು ನುಗ್ಗುತ್ತದೆ ಎನ್ನುವುದು ಮಳೆದಿನಗಳಲ್ಲಿನ ಸಾಮಾನ್ಯ ವಿಶ್ಲೇಷಣೆ. ಇದು ಸರಿಯಾದ ವಿಶ್ಲೇಷಣೆಯೂ ಹೌದು. ಪ್ರಶ್ನೆ ಇರುವುದು – ಚರಂಡಿಗಳು ಅಥವಾ ರಾಜಕಾಲುವೆಗಳು ಯಾಕೆ ಕಟ್ಟಿಕೊಳ್ಳುತ್ತವೆ ಎನ್ನುವುದರಲ್ಲಿ. ಈ ಪ್ರಶ್ನೆಗೆ ಎರಡು ಉತ್ತರಗಳನ್ನು ಕಂಡುಕೊಳ್ಳಬಹುದು. ಒಂದು: ರಾಜಕಾಲುವೆಗಳ ಒತ್ತುವರಿ. ಇನ್ನೊಂದು: ಕಸದ ಯದ್ವಾತದ್ವಾ ಚೆಲ್ಲುವಿಕೆ.

ರಾಜಕಾಲುವೆಗಳ ಒತ್ತುವರಿ ಮಹಾನಗರಗಳನ್ನು ಬಾಧಿಸುತ್ತಿರುವ ರೋಗಗಳಲ್ಲೊಂದು ಎನ್ನುವಂತಾಗಿದೆ. ಬೆಂಗಳೂರಿನ ಉದಾಹರಣೆಯನ್ನೇ ನೋಡಿ. ರಾಜಕಾಲುವೆಗಳ ಮೇಲೆಯೇ ಮಹಲುಗಳು, ಮಾಲುಗಳು, ಅಪಾರ್ಟ್‌ಮೆಂಟ್‌ಗಳು ನಿರ್ಮಾಣವಾಗಿವೆ ಎಂದು ವರದಿಗಳು ಹೇಳುತ್ತಿವೆ. ಅಪರೂಪಕ್ಕೊಮ್ಮೆ ಕೆಲವು ಒತ್ತುವರಿಗಳು ತೆರವಾಗುವುದನ್ನು ಹೊರತುಪಡಿಸಿದರೆ, ಉಳಿದಂತೆ ಅಕ್ರಮ ಕಾಮಗಾರಿಗಳು ದುಡ್ಡಿನ ಮರಿ ಹಾಕುತ್ತಲೇ ಇವೆ. ಪ್ರಭಾವಿ ರಾಜಕಾರಣಿಗಳೇ ಅಕ್ರಮ ನಿರ್ಮಾಣಗಳ ಹಿಂದಿರುವಾಗ, ರಾಜಕಾಲುವೆಗಳಲ್ಲಿ ನೀರು ಸರಾಗವಾಗಿ ಹರಿಯುವುದಾದರೂ ಹೇಗೆ?

ಚರಂಡಿಗಳು ಹಾಗೂ ರಾಜಕಾಲುವೆಗಳ ಉಸಿರುಕಟ್ಟುವುದರಲ್ಲಿ ಸಾರ್ವಜನಿಕರ ಪಾತ್ರವೂ ಇದೆ. ನಮ್ಮ ಪಾಪದ ಫಲಗಳೇ ಮೋರಿಯ ಗಂಟಲಿಗೆ ಕಡುಬಾಗಿವೆ. ಪ್ರತಿ ನಿತ್ಯ ಒಂದಲ್ಲಾ ಒಂದು

